ಒ ಎಸ್ ನಂ.**129/2021**
ಪಿ.ಡಬ್ಲ್ಯೂ**1**

**ದಿನಾಂಕಃ 05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 4, 6, 7 ಪ್ರತಿವಾದಿ ಪರ ಟಿ. ಶ್ರೀಧರ್ ವಕೀಲರಿಂದಃ-**

ಪ್ರತಿವಾದಿಗಳು ದಾವಾ ಆಸ್ತಿ ಯಾವ ರೀತಿ ಸಂಬಂಧ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ 4-5 ವರ್ಷಗಳಿಂದ ನಮಗೆ ತೊಂದರೆ ಕೊಡುತ್ತಿದ್ದಾರೆ. ದಾವಾ ಆಸ್ತಿ ಸರ್ವೇ ನಂ.75/1 ರಲ್ಲಿ ಬರುತ್ತದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾವ ಸರ್ವೇ ನಂಬರ್ ನಲ್ಲಿ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ವಾದ ಪತ್ರದ 17ನೇ ಪ್ಯಾರಾದಲ್ಲಿ ಪ್ರತಿವಾದಿಯರು ದಾವಾ ಆಸ್ತಿಗೆ ಮಾಲೀಕರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದೇನೆ ಆದರೆ ಅವರು ಯಾವ ರೀತಿ ಮಾಲೀಕರು ಎಂದು ನನಗೆ ಗೊತ್ತಿಲ್ಲ. ಕೆ. ಮುನಿರೆಡ್ಡಿ ರವರ ಮುಖಾಂತರ ನಾನು IHC No.18/86/87 ರ ಬಗ್ಗೆ ತಿಳಿದುಕೊಂಡಿದ್ದೆನು. IHC No.18/86/87 ಇದು ಮುಟ್ಯೇಷನ್ ಆದೇಶ ಆಗಿರುತ್ತದೆ. IHC No.18/86/87 ಅದರ ಪ್ರಕಾರ 1 ಎಕರೆ ಆಸ್ತಿ 4 ಜನರ ಹೆಸರಿನಲ್ಲಿ ಕಾಣೆಸಿತ್ತು, ಅದರ ಪ್ರಕಾರ ಯಾರ ಹೆಸರಿಗೆ ಯಾವ ಆಸ್ತಿ ಎನ್ನುವುದು ನನಗೆ ಗೊತ್ತಿಲ್ಲ. IHC No.18/86/87 ರ ಆದೇಶದ ಪ್ರಕಾರ ಇದು ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆಗೆ ಸಂಬಂಧಿಸಿದೆ ಎನ್ನುವುದು ಸರಿಯಲ್ಲ. ಮೇಲೆ ನಾನು ಹೇಳಿದಂತೆ 1 ಎಕರೆ ಆಸ್ತಿಯ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ, ಕೇವಲ ಜೆರಾಕ್ಸ್ ಪ್ರತಿ ಇರುತ್ತದೆ. IHC No.18/86/87 ಇದರ ಆದೇಶದ ಪ್ರತಿಯನ್ನು ಪಡೆಯಲು ಅರ್ಜಿ ಕೊಟ್ಟಿನು, ಆದರೆ ಅದು ಹಾಳಾಗಿದೆ ಎಂದು ನನಗೆ ಹಿಂಬರಹವನು ನೀಡುತ್ತಾರೆ. ಪ್ರತಿವಾದಿಯರು ಮೌಖಿಕವಾಗಿ IHC No.18/86/87 ರ ಆದೇಶದ ಬಗ್ಗೆ ಹೇಳಿದ್ದರಿಂದ ಅದನ್ನು ದಾವೆಯಲ್ಲಿ ಬರೆಸಿರುತ್ತೇನೆ. ಪ್ರತಿವಾದಿಯರು ನನ್ನ ಮುಂದೆ ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರಲಿಲ್ಲ.

ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆ ಈ ಜಮೀನು ಪ್ರತಿವಾದಿಯವರ ಹಿರಿಯರ ಕಾಲದಿಂದಲು ಅವರ ಸ್ವಾಧೀನಾನುಭವದಲ್ಲಿ ಇದೆ ಎನ್ನುವುದು ಸರಿಯಲ್ಲ. ಪ್ರತಿವಾದಿಗಳ ಅಜ್ಜ ನಂಜುಡಪ್ಪ ಭೂ-ನ್ಯಾಯಮಂಡಳಿಯ ಮುಂದೆ ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆ ಜಮೀನು ತಮ್ಮ ಸ್ವಾಧೀನದಲ್ಲಿದೆ ಮತ್ತು ಅದನ್ನು ಮಂಜೂರು ಮಾಡಿ ಎಂದು ಅರ್ಜಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಂಜುಡಪ್ಪ ತೀರಿಕೊಂಡ ಮೇಲೆ ಆತನ ಹೆಂಡತಿ ಲಕ್ಷ್ಮಮ್ಮ ಅಂದರೆ ಈ ಪ್ರತಿವಾದಿಗಳ ತಾಯಿ/ ಅಜ್ಜಿ ಹೆಸರಿಗೆ ಭೂ-

ನ್ಯಾಯಮಂಡಳಿಯವರು ಸದರಿ ಆಸ್ತಿಯನ್ನು ಮಂಜೂರು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದರ ನಂತರ ಲಕ್ಷ್ಮಮ್ಮ ತೀರಿಕೊಂಡ ಮೇಲೆ ಈ ಪ್ರತಿವಾದಿಗಳು ಸದರಿ ಆಸ್ತಿಯ ಸ್ವಾಧೀನಾನುಭವದಲ್ಲಿ ಇದ್ದಾರೆ ಎನ್ನುವುದು ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿರುವ ಸದರಿ ಜಮೀನಿಗೆ ವಿಲೇಜ್ ಪಂಚಾಯತ್ ಖಾತಾ ನಂ.724 ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ತಂದೆ ಹೆಸರಿನಲ್ಲಿರುವ ಕ್ರಯಪತ್ರ ಮತ್ತು ಈಗ ನನ್ನ ತಾಯಿಯ ಹೆಸರಿನಲ್ಲಿರುವ ಖಾತಾ ಆದಾರದ ಮೇಲೆ ದಾವಾ ಆಸ್ತಿ ನನಗೆ ಸೇರಿದೆ ಎಂದು ಹೇಳುತ್ತಿದ್ದೇನೆ. 1997 ರಲ್ಲಿ ನನ್ನ ತಂದೆ ಹೇಮರಾಮ್ ಚೌದರಿ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಂದ ದಾವಾ ಆಸ್ತಿಯನ್ನು ಖರೀದಿಸಿದ್ದಾನೆ. ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರು ಚಂದ್ರಪ್ಪ ಇವರಿಂದ ಆಸ್ತಿಯನ್ನು ಖರೀದಿಸಿದ್ದರು. ಸದರಿ ಚಂದ್ರಪ್ಪ ಈ ದಾವೆಯ 6 ನೇ ಪ್ರತಿವಾದಿಯಾಗಿದ್ದಾನೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾನೆ. ದಿಃ 25.05.1992 ರಲ್ಲಿ ಚಂದ್ರಪ್ಪ ದಾವಾ ಆಸ್ತಿ ಯನ್ನು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿದ್ದಾನೆ. ಆದರೆ ಅದು ಯಾವ ದಾಖಲೆಯ ಪ್ರಕಾರ ಮಾರಾಟ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಗೆ ಆಸ್ತಿ ಮಾರಾಟ ಮಾಡಿದ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಯಾವ ದಾಖಲೆಯ ಆದಾರದ ಮೇಲೆ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ದಾವಾ ಆಸ್ತಿಗೆ ಮಾಲೀಕರು ಆಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ, ಆದರೆ ಖಾತೆ ಅವರ ಹೆಸರಿಗೆ ಇತ್ತು. ನನ್ನ ತಂದೆ ದಾವಾ ಆಸ್ತಿ ಖರೀದಿಸುವಾಗ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಂದ ಯಾವ ಯಾವ ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ.

ದಿಃ 30.06.1997 ರಂದು ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ಮೂಲ ಕ್ರಯಪತ್ರ ಯಾರ ಬಳಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮೂಲ ಕ್ರಯಪತ್ರವನ್ನು ನಾನು ನೋಡಿಲ್ಲ ಅದರ ಪ್ರತಿಯನ್ನು ನೋಡಿದ್ದೇನೆ. 1 ನೇ ವಾದಿ ನನ್ನ ತಾಯಿ. ದಾವಾ ಆಸ್ತಿಯ ಬಗ್ಗೆ ನನ್ನ ತಾಯಿ ನನಗೆ ಯಾವುದೇ ದಾಖಲೆಗಳನ್ನು ತೋರಿಸಿಲ್ಲ. ಈ ದಾವೆ ಜೊತೆಗೆ ಹಾಜರು ಪಡಿಸಿರುವ ದಾಖಲೆಗಳ ಪ್ರತಿಗಳನ್ನು ನಾನು ಪಡೆದಿರುತ್ತೇನೆ, ನನ್ನ ತಾಯಿ ನನಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ.

ನನ್ನ ತಂದೆ ತಾಯಿ 1997 ರಲ್ಲಿ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರ ಜೊತೆ ಮಾಡಿದ ಕ್ರಯದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ನನ್ನ ತಂದೆಗೆ ದಾವಾ ಆಸ್ತಿಯ ಸ್ವಾಧೀನ ಕೊಟ್ಟಿದ್ದರು ಎಂದು ನನ್ನ ತಂದೆ ನನಗೆ ಹೇಳಿದ್ದರು.

ದಾವಾ ಆಸ್ತಿಗಳು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಭಾಗ ಆಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ತಾಯಿ/ ಅಜ್ಜಿ ಲಕ್ಷ್ಮಮ್ಮ ತೀರಿಕೊಂಡ ಮೇಲೆ RR No.724 ರಂತೆ ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. RR No.724 ನ್ನು ವಿಲೇಜ್ ಪಂಚಾಯತ್ ನಂ.724 ಎಂದು ತೋರಿಸಿ ದಿಃ 30.06.1997 ರಂದು ನನ್ನ ತಂದೆ ಮತ್ತು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಕ್ರಯಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ದಿಃ 30.06.1997 ರಂದು RR No.724 ರ ಆಸ್ತಿ ಇದು ಯಾರ ಹೆಸರಿಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ವಿಲೇಜ್ ಪಂಚಾಯತ್ ನಂ.724 ಇದು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಯವರ ಹೆಸರಿನಲ್ಲಿ ಇತ್ತು. ವಿಲೇಜ್ ಪಂಚಾಯತ್ ನಂ.724 ಇದು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರ ಹೆಸರಿಗೆ ಯಾರ ಹೆಸರಿನಿಂದ ವರ್ಗಾವಣೆ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ದಿಃ 25.05.1992 ರಂದು ಚಂದ್ರಪ್ಪ ಎನ್ನುವ ವ್ಯಕ್ತಿ ಯಾವುದೇ ನೊಂದಾಯಿತ ದಾಖಲೆಯ ಮುಖಾಂತರ ಸರ್ವೇ ನಂ. 75/1 ರಲ್ಲಿನ ದಾವಾ ಆಸ್ತಿಯನ್ನು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿಲ್ಲ ಎನ್ನುವುದು ಸರಿಯಲ್ಲ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿದ ಕ್ರಯಪತ್ರದ ಪ್ರತಿಯನ್ನು ನಾನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಯಾವುದೇ ನೊಂದಾಯಿತ ದಾಖಲೆಯನ್ನು ಸಬ್ ರಿಜಿಸ್ಟರ್ ಕಚೇರಿಯಿಂದ ಪಡೆಯಬಹುದು ಎನ್ನುವುದು ನನಗೆ ಗೊತ್ತಿಲ್ಲ.

ನಿಪಿ.1 ನ್ನು ನಾನು ಸಬ್ ರಿಜಿಸ್ಟರ್ ಕಚೇರಿಯಿಂದ ಪಡೆದಿದ್ದೇನೆ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಗೆ ದಾವಾ ಆಸ್ತಿಯನ್ನು ನೊಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುವುದಿಲ್ಲ, ಆದ್ದರಿಂದ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿಲ್ಲ ಎನ್ನುವುದು ಸರಿಯಲ್ಲ. ಚಂದ್ರಪ್ಪನಿಗೆ ದಾವಾ ಆಸ್ತಿಯಲ್ಲಿ ಯಾವ ರೀತಿ ಹಕ್ಕು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ಚಂದ್ರಪ್ಪ ಮತ್ತು ಆತನ ಕುಟುಂಬದ ಸದಸ್ಯರು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆಯಲ್ಲಿರುವ ದಾವಾ ಸ್ವತ್ತಿನಲ್ಲಿ ಜಂಟಿ ಹಕ್ಕನ್ನು ಹೊಂದಿದ್ದಾರೆ

ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಖಾತೆ ಇವತ್ತಿಗೂ ಕೂಡ ಪ್ರತಿವಾದಿಗಳ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಸ್ವಾಧೀನಾನುಭವದಲ್ಲಿ ಇವತ್ತಿಗೂ ಕೂಡ ಪ್ರತಿವಾದಿಗಳು ಇದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಭಾಗ ಆಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಸದರಿ ಆಸ್ತಿಗೆ ಕಂದಾಯ ಕಟ್ಟುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ದಿನಾಂಕಃ 30.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4, 6, 7 ಪ್ರತಿವಾದಿ ಪರ ಟಿ. ಶ್ರೀಧರ್ ವಕೀಲರಿಂದಃ-**

ಪ್ರತಿವಾದಿಯರು ದಾವಾ ಆಸ್ತಿಯ ನನ್ನ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಈ ದಾವೆ ಹೂಡಿದ್ದೇನೆ. ದಾವಾ ಆಸ್ತಿಯನ್ನು ಒಳಗೊಂಡು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇವತ್ತಿಗು ಕೂಡ ಪ್ರತಿವಾದಿಯರ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಪ್ರತಿವಾದಿ ನಂ.1 ರಿಂದ 9 ರವರು ನನ್ನ ತಂದೆ ತಾಯಿ ಅಥವಾ ಅವರ ಮಾರಾಟಗಾರರು ಅಥವಾ ಇನ್ನಾವುದೇ ಪರವಾಗಿ ಯಾವುದೇ ಕ್ರಯಪತ್ರ ಅಥವಾ ಇನ್ನಾವುದೇ ಆಸ್ತಿ ವರ್ಗಾವಣೆ ಪತ್ರವನ್ನು ಬರೆದುಕೊಟ್ಟಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಶಾಂತಿಲಾಲ್ ನನ್ನ ತಂದೆಯ ಪರವಾಗಿ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಆ ರೀತಿ ಪ್ರತಿವಾದಿಯರು ಯಾವುದೇ ದಾಖಲೆ ಬರೆದುಕೊಡದೆ ಇದ್ದರು ಕೂಡ ದಿಃ 25.05.1992 ರಂದು 6 ನೇ ಪ್ರತಿವಾದಿ, ಶಾಂತಿಲಾಲ್ ಈತನ ಪರವಾಗಿ ಕ್ರಯಪತ್ರ ಬರೆದುಕೊಟ್ಟಿದ್ದಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಿಃ 25.05.1992 ರಂದು ಪ್ರತಿವಾದಿ ನಂ.1 ರಿಂದ 9 ರವರು ದಾವಾ ಆಸ್ತಿಯ ಮಾಲೀಕತ್ವ ಅಥವಾ ಸ್ವಾಧೀನವನ್ನು ಶಾಂತಿಲಾಲ್ ಈತನಿಗೆ ಬಿಟ್ಟುಕೊಟ್ಟಿರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

ದಿಃ 25.05.1992 ರಂದು ದಾವಾ ಆಸ್ತಿಯನ್ನು ಒಳಗೊಂಡು ಪೂರ್ತಿ ಜಮೀನಿನ ಖಾತೆ ನಂ.724 ಪ್ರತಿವಾದಿ ನಂ.1 ರಿಂದ 9 ರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ವಿಲೇಜ್ ಪಂಚಾಯತ್ ಖಾತಾ ನಂ.724 ಇದು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರ ಹೆಸರಿನಲ್ಲಿತ್ತು ಎನ್ನುತ್ತಾರೆ. ಸದರಿ ಖಾತಾವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರ ಹೆಸರಿನಲ್ಲಿ ಖಾತಾ ಇರದೆ ಇದ್ದುದ್ದರಿಂದ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ಖಾತಾ ನಂ.724 ಇವತ್ತಿಗು ಕೂಡ ಪ್ರತಿವಾದಿ ನಂ.1 ರಿಂದ 9 ರವರ ಹೆಸರಿನಲ್ಲಿದೆ ಎನ್ನುವುದು ಸರಿಯಲ್ಲ. ಪ್ರತಿವಾದಿ ನಂ.1 ರಿಂದ 9 ರವರು ಯಾವುದೇ ಆಸ್ತಿಯನ್ನು ಶಾಂತಿಲಾಲ್ ಕಾಂಕರೀಯ ಇವರಿಗೆ ಮಾರಾಟ ಮಾಡದೇ ಇದ್ದರು ನನ್ನ ತಂದೆ,

ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರ ಜೊತೆ ಶಾಮಿಲಾಗಿ ಕೃಷಿ ಭೂಮಿಯ ಖಾತಾ ನಂ.724 ನ್ನು ದಾವಾ ಆಸ್ತಿಗೆ ತೋರಿಸಿ, ದಾವಾ ಆಸ್ತಿಗಳ ಬಗ್ಗೆ ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ.

ನಿಪಿ.5 Encumbrance certificate ನಲ್ಲಿ ದಿಃ 25.05.1992 ರ ಕ್ರಯಪತ್ರದ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎನ್ನುವುದು ನಿಜ. ನಿಪಿ.6 ರಿಂದ 12 ದಾಖಲೆಗಳನ್ನು ಈ ದಾವೆ ದಾಖಲಿಸಿದ ನಂತರ ಈ ದಾವೆಗೋಸ್ಕರ ನಾನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ.14 ಕ್ರಯಪತ್ರದಲ್ಲಿ ನಮ್ಮ ಮಾರಾಟಗಾರನಾದ ಶಾಂತಿಲಾಲ್ ಕಾಂಕರೀಯ ಈತನಿಗೆ ಆಸ್ತಿ ಯಾವ ರೀತಿ ಬಂದಿತ್ತು ಎನ್ನುವುದರ ಬಗ್ಗೆ ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ನಿಪಿ.14 ಕ್ರಯಪತ್ರದಲ್ಲಿ 3 ಎಕರೆ 12 ಗುಂಟೆ ಜಮೀನಿನ ಖಾತಾವನ್ನು ದಾವಾ ಆಸ್ತಿಯ ಖಾತಾ ಎಂದು ತೋರಿಸಲಾಗಿದೆ ಎನ್ನುವುದು ಸರಿಯಲ್ಲ. ನಿಪಿ.15 ವಿದ್ಯುತ್ ಬಿಲ್ ನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ನಿಪಿ.16 ರಿಂದ 20 ತೆರಿಗೆ ಪಾವತಿಗಳ ಪ್ರಕಾರ 2008 ರಿಂದ 2013 ತೆರಿಗೆಯನ್ನು ದಿಃ 25.11.2012 ರಂದು ಒಂದೇ ದಿನ ಪಾವತಿಸಲಾಗಿದೆ ಎನ್ನುವುದು ಸರಿಯಲ್ಲ. ನಿಪಿ.21 ಮತ್ತು 22 ತೆರಿಗೆ ಪಾವತಿಗಳು ದಿಃ 19.07.2014 ರಂದು ಒಂದೇ ದಿನ ತೆರಿಗೆ ಕಟ್ಟಿದ್ದು ಆಗಿರುತ್ತವೆ ಎನ್ನುವುದು ನಿಜ. ಈ ದಾವೆ ದಾಖಲಿಸುವುದಕೋಸ್ಕರ ತೆರಿಗೆ ಪಾವತಿಗಳನ್ನು ನಂತರ ದಿನಗಳಲ್ಲಿ ತೆರಿಗೆ ಕಟ್ಟಿ ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯನ್ನು ಯಾವುದೇ ಸರ್ಕಾರದ ಯೋಜನೆಗೆ ಸ್ವಾಧೀನಪಡಿಸಿಕೊಂಡಿರುವುದಿಲ್ಲ. ನಿಪಿ.29 ರ ಪ್ರಕಾರ ಭೂ-ಸ್ವಾಧೀನಕ್ಕೆ ಬಿಬಿಎಂಪಿ ಯವರು ನೋಟಿಸ್ ಕೊಟ್ಟಿದ್ದಾರೆ ಎನ್ನುವುದು ನಿಜ. ದಿಃ 25.05.1992 ರ ನಾನು ಹೇಳುವ ಕ್ರಯಪತ್ರ ಸೃಷ್ಟಿ ಮಾಡಿದ ದಾಖಲೆಯಾಗಿರುವುದರಿಂದ, ಅದನ್ನು ನಿಪಿ.29 ನೋಟಿಸ್ ನ ಪ್ರಕಾರ ಅದನ್ನು ಬಿಬಿಎಂಪಿ ಯವರ ಮುಂದೆ ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಕ್ರಯಪತ್ರವನ್ನು ನಾನು ಬಿಬಿಎಂಪಿ ಯವರಿಗೆ ತೋರಿಸಿದೆ, ನಂತರ ಅವರು ಭೂ-ಸ್ವಾಧೀನ ಪ್ರಕ್ರಿಯೆನ್ನು ಕೈಬಿಟ್ಟಿದ್ದಾರೆ ಎನ್ನುತ್ತಾರೆ.

ನಿಪಿ.32 ರಿಂದ 41 ವರೆಗಿನ ದಾಖಲೆಗಳನ್ನು ಈ ದಾವೆ ದಾಖಲಿಸಿದ ನಂತರ, ನಾನು ಹೇಳಿಕೊಳ್ಳುವ ಸ್ವಾಧೀನವನ್ನು ಸಾಬೀತು ಪಡಿಸಲು ಈ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ.42 ಇದು ದಾವಾ ಆಸ್ತಿಯಲ್ಲಿನ ನನ್ನ ಬಾಡಿಗೆದಾರ ನನಗೆ ನೀಡಿದ ದಾಖಲೆಯಾಗಿರುತ್ತದೆ. 1997 ರಲ್ಲಿ ದಾವಾ ಆಸ್ತಿಯಲ್ಲಿ 300 ಚದರ ಅಡಿಯ ಶೆಡ್ ಗಳು ಇದ್ದವು. ಆ ಶೆಡ್ ಗಳು ಎ.ಸಿ ಶೀಟಿನ ಶೆಡ್ ಗಳಾಗಿದ್ದವು.

1995 ಅಥವಾ 1997 ರಿಂದ ಇವತ್ತಿನವರೆಗೆ ದಾವಾ ಆಸ್ತಿಯಲ್ಲಿ ಯಾವುದೇ ಕಟ್ಟಡ ಕಟ್ಟಿರುವುದಿಲ್ಲ ಎನ್ನುವುದು ನಿಜ. ನಿಪಿ.32 ಬಾಡಿಗೆ ಕರಾರು ಪತ್ರ ದಾವಾ ಆಸ್ತಿಯ ಬಗ್ಗೆ ಆಗಿರುವುದಿಲ್ಲ, ಇದು ಬೇರೆ ಆಸ್ತಿಯ ಬಗ್ಗೆ ಆಗಿರುತ್ತದೆ.

ನಿಪಿ.31 ಲೀಸ್ ಡೀಡ್ ಪ್ರಕಾರ ನಾನು ಪೂರ್ತಿ ದಾವಾ ಆಸ್ತಿಯನ್ನು ಬಾಡಿಗೆಗೆ ಕೊಟ್ಟಿರುವುದಿಲ್ಲ. ನಿಪಿ.31 ಲೀಸ್ ಡೀಡ್ ಪ್ರಕಾರ 200 ಚದರ ಅಡಿ ಜಾಗವನ್ನು ಬಾಡಿಗೆಗೆ ಕೊಟ್ಟಿದ್ದೆನು. ನಿಪಿ.31 ಲೀಸ್ ಡೀಡ್ ನಲ್ಲಿ ಶೆಡ್ ಗಳನ್ನು ಬಾಡಿಗೆಗೆ ಕೊಟ್ಟಿ ಬಗ್ಗೆ ನಮೂದು ಮಾಡಿಲ್ಲ, ಕೇವಲ ಖಾಲಿ ಜಾಗದ ಬಗ್ಗೆ ಇರುತ್ತದೆ. ಬಾಡಿಗೆದಾರ ಮಾರ್ಬಲ್ ಮತ್ತು ಗ್ರಾನೈಟ್ ವ್ಯಾಪಾರ ಮಾಡುತ್ತಿದ್ದನು. 100 ಚದರ ಅಡಿಯ ಜಾಗದಲ್ಲಿ ನನ್ನ ಬಾಡಿಗೆದಾರ ಕಚೇರಿ ಮಾಡಿಕೊಂಡಿದ್ದನು. 100 ಚದರ ಅಡಿಯ ಕಚೇರಿ ಜಾಗದ ಬಗ್ಗೆ ನಿಪಿ.31 ರಲ್ಲಿ ನಮೂದಿಸಿರುವುದಿಲ್ಲ. ನಿಪಿ.31 ರಲ್ಲಿ ಕಾಣಿಸಿರುವ ಬಾಡಿಗೆದಾರ ನನ್ನ ಗೆಳೆಯ ಆಗಿದ್ದಾನೆ ಎನ್ನುವುದು ಸರಿಯಲ್ಲ. ಕೇವಲ ಈ ದಾವೆಗೋಸ್ಕರ ನಿಪಿ.31 ದಾಖಲೆಯನ್ನು ನಾನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎನ್ನುವುದು ಸರಿಯಲ್ಲ. 2015 ರಿಂದ 2019 ವರೆಗೆ ದಾವಾ ಆಸ್ತಿಯನ್ನು ನಿಪಿ.1 ಲೀಸ್ ಡೀಡ್ ಪ್ರಕಾರ ಬಾಡಿಗೆಗೆ ಕೊಟ್ಟಿದ್ದೆನು. ಸದರಿ ಬಾಡಿಗೆದಾರರನ್ನು ಸಾಕ್ಷಿದಾರನಾಗಿ ನ್ಯಾಯಾಲಯದಲ್ಲಿ ವಿಚಾರಣೆ ಮಾಡುತ್ತೀರಾ ಎಂದರೆ ಸಾಕ್ಷಿ ಈಗ ಅವರು ನನ್ನ ಸಂಪರ್ಕದಲ್ಲಿಲ್ಲ ಎನ್ನುತ್ತಾರೆ. ಆ ರೀತಿ ದಾವಾ ಆಸ್ತಿಯನ್ನು ನಾನು ಬಾಡಿಗೆಗೆ ಕೊಡದೆ ಇದ್ದರು, ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ಈಗಲು ಕೂಡ ಖಾಲಿ ಜಾಗವಾಗಿಯೇ ಇದೆ ಎನ್ನುವುದು ಸರಿಯಲ್ಲ.

ಪ್ರತಿವಾದಿ ನಂ.1 ರಿಂದ 9 ಮತ್ತು ಅವರ ಬಾಡಿಗೆದಾರರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎನ್ನುವುದು ಸರಿಯಲ್ಲ. ಕೃಷ್ಣಯ್ಯ ಮತ್ತು ಮಂಜುನಾಥ ಎನ್ನುವ ಬಾಡಿಗೆದಾರರು ಈಗ 2 ವರ್ಷಗಳಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ. ಕೃಷ್ಣಯ್ಯ ಮತ್ತು ಮಂಜುನಾಥ ಎನ್ನುವವರು ಈಗ ಬಾಡಿಗೆದಾರರಾಗಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. 2015 ರಿಂದ ಅಥವಾ ಇವತ್ತಿಗು ಕೂಡ ದಾವಾ ಆಸ್ತಿಯಲ್ಲಿ ಯಾವುದೇ ಬಾಡಿಗೆದಾರರು ಇರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ.43 ಆದೇಶವನ್ನು ಸದರಿ ಆದೇಶದಲ್ಲಿ ಕಾಣಿಸಿರುವ ವ್ಯಕ್ತಿಗಳು ಇದೆ ಪ್ರತಿವಾದಿಯರ ಮೇಲೆ ಕೇಸು ಹಾಕಿದ್ದಾರೆ ಎಂದು ತೋರಿಸಲು ಹಾಕಿದ್ದೇನೆ. ಮಲ್ಲಸಂದ್ರ ಗ್ರಾಮದ ಸರ್ವೇ ನಂ.75/1 ಇದರಲ್ಲಿನ ಸೈಟುಗಳ ಮಾಲೀಕರು ನಿಪಿ.43 ರ ಪ್ರಕಾರ ಅರ್ಜಿ ಸಲ್ಲಿಸಿದ್ದಾರೆ. ಸದರಿ ಅರ್ಜಿದಾರರ ಹೆಸರಿನಲ್ಲಿನ ಮುಟೇಷನ್ ಆರ್ಡರ್ ನ್ನು ರದ್ದು ಪಡಿಸಲು ನಿಪಿ.43 ರ ಪ್ರಕಾರ ಅರ್ಜಿ ಸಲ್ಲಿಸಿದ್ದಾರೆ. ಸದರಿ ನಿಪಿ.43 ರ ಅರ್ಜಿ

ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಸರ್ವೇ ನಂ.75/1 ರಲ್ಲಿ ಬರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.43 ಅರ್ಜಿಯ ಮೇಲೆ ಏನು ಆದೇಶವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.43 ಅರ್ಜಿ ವಜಾ ಆಗಿ, ಮುಟೇಷನ್ ಪ್ರತಿವಾದಿಯರ ಹೆಸರಿಗೆ ಮುಂದುವರೆಯಲು ಆದೇಶವಾಗಿದೆ ಮತ್ತು ಅದರ ಪ್ರಕಾರ ಮುಟೇಷನ್ ಮತ್ತು ಆರ್ ಟಿ ಸಿ ಪ್ರತಿವಾದಿಗಳ ಹೆಸರಿನಲ್ಲಿ ಜಂಟಿಯಾಗಿ ಮುಂದುವರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.43 ರಲ್ಲಿನ ಅರ್ಜಿದಾರರ ಜೊತೆ ಚರ್ಚಿಸಿರುವುದಿಲ್ಲ ಅಥವಾ ಸದರಿ ಅರ್ಜಿಯ ಫಲಿತಾಂಶದ ಬಗ್ಗೆ ನಾನು ಮಾಹಿತಿ ಪಡೆದಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**